
# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಸಂಪುಟ : 37 ಸಂಚಿಕೆ : 19 ದುರ್ಮುಖಿ–ವೈಶಾಖ ಕಲಿಯುಗಾಬ್ದ 5117 15–5–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಧರ್ಮಪ್ರವರ್ತಕ; ಜಗತ್ತಿನ ಮೊತ್ತ ಮೊದಲ ಪತ್ರಕರ್ತ 'ನಾರದ ಮುನಿ'




ನಾರದ ಮುನಿಗಳು ಬ್ರಹ್ಮನ ಮಾನಸ ಪುತ್ರರು. ಚಿರಂಜೀವಿಗಳು. ನಾರದ ಮುನಿಗಳು ಜನಿಸಿದ ವೈಶಾಖ ಮಾಸದ ಕೃಷ್ಣ ಪಕ್ಷದ ಬಿದಿಗೆಯಂದು ಜಗತ್ತಿನಾದ್ಯಂತ 'ನಾರದ ಜಯಂತಿ'ಯನ್ನು ಆಚರಿಸಲಾಗುತ್ತದೆ. ನಾರ ಎಂದರೆ ನಾರಾಯಣ ಎಂದೂ, ಮಾನವ ಮತ್ತು ಜ್ಞಾನ ಎಂದೂ ಅರ್ಥಗಳಿವೆ. ದಾ ಎಂದರೆ 'ಕೊಡುವವನು' ಎಂದು. 'ನರರಿಗೆ ವಿಶೇಷ ಜ್ಞಾನವನ್ನು ಕೊಡುವವನು ನಾರದ'. ನಾರಾಯಣನ ನಾಮವನ್ನು ಪಸರಿಸುವವನು ಎಂದೂ ಜ್ಞಾನವನ್ನು ಸಂರಕ್ಷಿಸುವವನು ಎಂದೂ ನಾರದ ಪದಕ್ಕೆ ವಿವರಣೆಗಳಿವೆ.

ಧರ್ಮದ ಮೂಲವಾದ ಎರಡು ಇತಿಹಾಸ ಗ್ರಂಥಗಳನ್ನು (ರಾಮಾಯಣ ಮತ್ತು ಮಹಾಭಾರತ) ರಚಿಸುವಲ್ಲಿ ನಾರದ ಮುನಿಗಳ ಪಾತ್ರ ದೊಡ್ಡದು. ವಾಲ್ಮೀಕಿ ಮಹರ್ಷಿಗಳು ಹದಿನಾರು ಗುಣಗಳುಳ್ಳ ಆದರ್ಶ ವ್ಯಕ್ತಿಯನ್ನು ಹುಡುಕುತ್ತಿದ್ದಾಗ ನಾರದ ಮುನಿಗಳು ಅವರನ್ನು ಭೇಟಿಯಾಗಿ ಐವತ್ತೇಳು ಗುಣಗಳುಳ್ಳ ಪುರುಷೋತ್ತಮ ಶ್ರೀರಾಮನ ಕಥೆ ಹೇಳಿದರು. ಇದು ರಾಮಾಯಣದ ರಚನೆಯ ಹಿನ್ನೆಲೆ. ಹಲವಾರು ಪುರಾಣಗಳಲ್ಲಿಯೂ ಸಹ ನಿರ್ಣಾಯಕ ಸಂಧರ್ಭಗಳಲ್ಲಿ ನಾರದ ಮುನಿಗಳು ಧರ್ಮದ ತಿರುಳನ್ನು ವಿವರಿಸಿ ಸರಿಯಾದ ಮಾರ್ಗದರ್ಶನ ನೀಡಿರುವುದನ್ನು ನಾವು ನೋಡಬಹುದು. ಮಹಾಭಾರತದಲ್ಲಿ ನಾರದ ಮುನಿಗಳು ಧರ್ಮರಾಜನ ಜೊತೆ ನಡೆಸಿದ ಚರ್ಚೆಯು ಆಡಳಿತ, ಸರ್ಕಾರದ ನಿರ್ವಹಣೆ ಇವುಗಳ ಬಗೆಗಿನ ಅತ್ಯುತ್ತಮ ವ್ಯಾಖ್ಯಾನವಾಗಿದೆ.

ನಾರದ ಮಹರ್ಷಿಗಳು ತ್ರಿಲೋಕ ಸಂಚಾರಿಗಳು. ಸತ್ಯಯುಗ, ತ್ರೇತಾಯುಗ ಮತ್ತು ದ್ವಾಪರಯುಗಗಳಲ್ಲಿ ಇದ್ದವರು. ತ್ರಿಮೂರ್ತಿಗಳ ಜೊತೆಗಿನ ಭೇಟಿ ನಾರದ ಮುನಿಗಳಿಗೆ ಸದಾ ಲಭ್ಯವಿರುವುದು ಜನನನಿತ. ಜೊತೆಗೆ ಕೇವಲ ದೇವತೆಗಳ ಜೊತೆಗಷ್ಟೇ ಅಲ್ಲದೆ ದಾನವರ ಜೊತೆ ಮತ್ತು ಭೂಲೋಕದ ರಾಜರ್ಷಿ ಮತ್ತಿತರರ ಜೊತೆ ನಾರದ ಮುನಿಗಳಿಗೆ ಸಂಪರ್ಕವಿತ್ತು. ಲೋಕ ಕಲ್ಯಾಣದ ದೃಷ್ಟಿಯಿಂದ ಇದು ಸದಾ ಲಾಭಕರ. ಸಾಕ್ಷಾತ್ ಭಗವಾನ್ ಶ್ರೀ ಕೃಷ್ಣನು ನಾರದ ಮುನಿಗಳನ್ನು 'ಅತ್ಯುತ್ತಮ ದೇವರ್ಷಿ' ಎಂದು ಬಣ್ಣಿಸಿರುವುದುಂಟು. ಮಹಾಭಾರತದ ಸಭಾಪರ್ವದಲ್ಲಿ ನಾರದ ಮುನಿಗಳನ್ನು ಉಪನಿಷತ್ತುಗಳನ್ನು ತಿಳಿದವರೆಂದೂ, ಪುರಾಣಗಳ ನಿಪುಣರೆಂದೂ ಮತ್ತು ದೇವತೆಗಳಿಂದ ಪೂಜಿಸಲ್ಪಡುವವರೆಂದೂ ವರ್ಣಿಸಲಾಗಿದೆ. ಆದಿಪರ್ವದಲ್ಲಿ ವೇದವ್ಯಾಸರು 29 ಶ್ಲೋಕಗಳಲ್ಲಿ ನಾರದ ಮುನಿಗಳ ಗುಣಗಾನ ಮಾಡಿದ್ದಾರೆ.

ನಾರದ ಮುನಿಗಳು ನಿಷ್ಣಾತ ಸಂವಹನಕಾರರು. ಅತ್ಯಂತ ಕ್ಲಿಷ್ಟಕರ ಸಂದರ್ಭಗಳನ್ನು ಲೀಲಾಜಾಲವಾಗಿ ನಿಭಾಯಿಸಬಲ್ಲವರು. ನಾರದ ಮುನಿಗಳು ಜಗತ್ತಿನ ಮೊದಲ ಬಾತ್ಮೀದಾರರು ಮತ್ತು ಪತ್ರಕರ್ತರು. ಪತ್ರಿಕಾ ಧರ್ಮದ ಸಾರವನ್ನು ಅರಿತವರು. ಧರ್ಮರಾಜನ ಜೊತೆಯಲ್ಲಿ ನಡೆಸಿದ ಸಂಭಾಷಣೆಯಲ್ಲಿ ಈ ಸಂಗತಿಗಳನ್ನು ವಿಶದವಾಗಿ ನಾರದ ಮುನಿಗಳು ತಿಳಿಸಿದ್ದಾರೆ. ಪತ್ರಕರ್ತನಾದವನು ಪರಿಸ್ಥಿತಿಯನ್ನು ಆಳವಾಗಿ ಅರಿತಿರಬೇಕು. ಮಾಹಿತಿಗಳನ್ನೆಲ್ಲಾ ಪತ್ರಕರ್ತನು ತಿಳಿದುಕೊಂಡಿರಬೇಕು. ಸಿಕ್ಕ ಮಾಹಿತಿಗಳನ್ನು ವಿಮರ್ಶಿಸುವ ಸಾಮರ್ಥ್ಯ ಪತ್ರಕರ್ತರಿಗಿರಬೇಕು. ಅಧ್ಯಯನಶೀಲನಾಗಿರಬೇಕು. ಮುಂದಾಲೋಚನೆ ಉಳ್ಳವನಾಗಿರಬೇಕು. ಜಗತ್ತಿಗೆ ಬೇಕಾದ ಮಾಹಿತಿ, ವಿವರಣೆಗಳನ್ನು ಸಮರ್ಥವಾಗಿ ತಲುಪಿಸಬಲ್ಲ ಸಾಮರ್ಥ್ಯ ಪತ್ರಕರ್ತನಿಗಿರಬೇಕು. ಈ ಎಲ್ಲಾ ಗುಣಗಳೂ ನಾರದ ಮುನಿಗಳಲ್ಲಿ ಸಹಜವಾಗಿಯೇ ಇತ್ತು.

ನಾರದ ಮುನಿಗಳು 'ನಾರದ ಸ್ಮೃತಿ' ಇತ್ಯಾದಿ ಹಲವಾರು ಕೃತಿಗಳ ರಚನಕಾರರು. ಸಂಗೀತದಲ್ಲಿ ನಿಷ್ಣಾತರು. ಅವರು ಹಾಡುಗಾರಿಕೆ ಮತ್ತು ತಮ್ಮ ಕೈಯಲ್ಲಿ ಹಿಡಿದ 'ಮಹತೀ' ಎಂಬ ವೀಣೆಯ ಸಹಿತ ಹಲವಾರು ಸಂಗೀತ ವಾದ್ಯಗಳನ್ನು ಬಲ್ಲವರು. ಜ್ಞಾನ ಭಂಡಾರವಾಗಿದ್ದ 'ನಾರದ ಭಕ್ತಿಸೂತ್ರ'ಗಳನ್ನು ವಿವರಿಸಿದವರು. ನಾರದ ಮುನಿಗಳು ರಚಿಸಿದ ಭಕ್ತಿಸೂತ್ರದಲ್ಲಿ 84 ಶ್ಲೋಕಗಳಿವೆ. ಈ ಶ್ಲೋಕಗಳು ಸರಳವಾಗಿದ್ದು ಭಕ್ತಿ ಯೋಗದ ಅನುಷ್ಠಾನಕ್ಕೆ ಸಹಕಾರಿಯಾಗಿದೆ.

ನಾರದ ಜಯಂತಿಯನ್ನು 'ಪತ್ರಕರ್ತರ ದಿನ' ಎಂದು ಆಚರಿಸಲಾಗುತ್ತಿದೆ. ಪತ್ರಿಕೋದ್ಯಮದ ಆದರ್ಶಗಳನ್ನು ಎತ್ತಿಹಿಡಿಯುವ ಪ್ರಯತ್ನದ ಭಾಗವಾಗಿ ಈ ದಿನದ ಕಾರ್ಯಕ್ರಮಗಳನ್ನು ಯೋಜಿಸಲಾಗುತ್ತದೆ. ಸಮಾಜಮುಖೀ ಪತ್ರಿಕೋದ್ಯಮಕ್ಕೆ ಪರಿಶ್ರಮ ಪಡುವ ಪತ್ರಕಾರರನ್ನು ಗುರುತಿಸುವ ಪ್ರಕ್ರಿಯೆಯೂ ಸಹ ನಾರದ ಜಯಂತಿಯ ಕಾರ್ಯಕ್ರಮಗಳ ಅಂಗವಾಗಿದೆ.

## ನಾರದ ಮುನಿಗಳ ಪ್ರಶ್ನೆಗಳಲ್ಲಿ ರಾಜಧರ್ಮ

ನಾರದ ಮುನಿಗಳು ಮಹಾರಾಜ ಯುಧಿಷ್ಠಿರನ ರಾಜಸಭೆಗೆ ಬಂದು ಮಾಡಿದ ಮಾರ್ಗದರ್ಶನ ಪ್ರಶ್ನೋತ್ತರಗಳ ರೂಪದಲ್ಲಿ ಇದೆ. ಪುರುಷಾರ್ಥಗಳು ಹಾಗೂ ರಾಜಧರ್ಮಗಳ ಬಗ್ಗೆ ನಾರದ ಮುನಿಗಳು ಕೇಳಿದ ಪ್ರಶ್ನೆಗಳಿಗೆ ಧರ್ಮರಾಜನು ತನ್ನ ಕಾರ್ಯವಿಧಾನವನ್ನು ವಿವರಿಸುತ್ತಾನೆ. ಮತ್ತು ಈ ತಿಳುವಳಿಕೆಯನ್ನು ತಾನು ನಾರದ ಮುನಿಗಳಿಂದಲೇ ಪಡೆದಿದ್ದಾಗಿ ಹೇಳುತ್ತಾರೆ.

"ಓ ಧರ್ಮರಾಜಾ, ನೀನು ಧರ್ಮವನ್ನು ಅರ್ಥಚಿಂತನೆಯೊಂದಿಗೆ ಮಾಡತ್ತಿರುವೆಯೇನು? ನಿನ್ನ ಅರ್ಥಚಿಂತನೆಯು ಧರ್ಮಚಿಂತನೆಯನ್ನು ಗೌಣವಾಗಿಸುತ್ತಿಲ್ಲವಷ್ಟೇ? ಭೌತಿಕ ಸಂಪತ್ತನ್ನು ಗಳಿಸುವ ನಿನ್ನ ಮಹತ್ವಾಕಾಂಕ್ಷೆಯು ಧರ್ಮಾಚರಣೆಗೆ ತೊಂದರೆ ಮಾಡುತ್ತಿದೆಯೇ? ಅಥವಾ ಧರ್ಮಪಾಲನೆಯಲ್ಲೇ ಮುಳುಗಿ ನಿನ್ನ ಬೊಕ್ಕಸ ಬರಿದಾಗುತ್ತಿದೆಯೇ? ನೀನು ಇಂದ್ರಿಯ ಸುಖದಲ್ಲಿ ಮುಳುಗಿ ಧರ್ಮ–ಅರ್ಥಗಳ ಸಾಧನೆಯನ್ನು ಕಡೆಗಣಿಸುತ್ತಿರುವೆಯೋ? ನಿನ್ನ ರಾಜ್ಯದ ರೈತರು ಸ್ಥಿತಿವಂತರೂ ಸಂತುಷ್ಟರೂ ಆಗಿದ್ದಾರೆಂದು ಹೇಳಬಲ್ಲೆಯಾ? ಕೃಷಿಗೆ ಬೇಕಾದ ನೀರಾವರಿ ವ್ಯವಸ್ಥೆಗಳು ಸಮರ್ಪಕವಾಗಿವೆಯೇ? ರೈತರಿಗೆ ಬೇಕಾದ ಬೀಜ ಇತ್ಯಾದಿಗಳು ಅವರಿಗೆ ಸಿಗುತ್ತಿದೆಯೇ? ಅವರಿಗೆ ಅಗತ್ಯವಾದಾಗ ಹಣದ ಮೂಲಗಳನ್ನು ಒದಗಿಸಿರುವೆಯಾ?

ನಿನ್ನ ಮಂತ್ರಿಗಳನ್ನು ಪ್ರಾಮಾಣಿಕರೂ, ಸಾಮಾಜಿಕ ಬದ್ಧತೆಯುಳ್ಳ ಜವಾಬ್ದಾರಿ ವ್ಯಕ್ತಿಗಳ ಸಮೂಹದಿಂದ ಆಯ್ಕೆ ಮಾಡಿಕೊಂಡಿದ್ದೀಯಾ? ಒಬ್ಬ ಪ್ರಜ್ಞಾವಂತ ನೂರು ಮೂರ್ಖರಿಗಿಂತ ಉತ್ತಮ ಎಂಬ ಪ್ರಾಚೀನ ವಾಕ್ಯವನ್ನು ನೆನಪಿನಲ್ಲಿ ಇಟ್ಟುಕೊಂಡಿರುವೆಯಾ? ಪ್ರಜೆಗಳನ್ನು ತಂದೆಯಂತೆ ಸಲಹುತ್ತಿರುವೆಯಾ?"

ನಾರದ ಮುನಿಗಳು ಧರ್ಮರಾಜನಿಗೆ ನೀಡಿದ ತಿಳುವಳಿಕೆಯಲ್ಲಿ ಮಾಧ್ಯಮ ಸಂಬಂಧೀ ಅಂಶಗಳೂ ಇವೆ. "ಪ್ರಜೆಗಳ ಶಕ್ತಿ ಅವರುಗಳಿಗಿರುವ ಮಾಹಿತಿ/ತಿಳುವಳಿಕೆಗಳ ಮೇಲೆ ನಿರ್ಧಾರಿತವಾಗುತ್ತದೆ. ಅವರಿಗೆ ಜಗತ್ತಿನ ಆಗು–ಹೋಗುಗಳು ತಿಳಿಯುತ್ತಿರಬೇಕು. ಅದಕ್ಕಾಗಿ ಜವಾಬ್ದಾರಿಯುತ ರಾಜನು ಅದಕ್ಕೆ ಬೇಕಾದ ವ್ಯವಸ್ಥೆಗಳನ್ನು ನಿರ್ವಹಿಸುತ್ತಿರಬೇಕು.

## ನಾರದ ಮುನಿಗಳ ಪ್ರಸ್ತುತತೆ

ನಾರದ ಭಕ್ತಿಸೂತ್ರದ 75–77 ಶ್ಲೋಕಗಳಲ್ಲಿ ವಿಸ್ತೃತ ಚರ್ಚೆಯ ನಿರುಪಯುಕ್ತತೆಯನ್ನು ಹೇಳಲಾಗಿದೆ. ಇದು ಭಕ್ತಿಯೋಗದ ಅನುಷ್ಠಾನಕ್ಕೆ ಮಾತ್ರ ಅನ್ವಯವಾಗದೇ ಮಾಧ್ಯಮ ರಂಗಕ್ಕೂ ಅನ್ವಯವಾಗುವಂತಿದೆ ಎಂದು ಪ್ರೊ. ಬಿ.ಕೆ. ಕುಟಿಯಾಲ ಅಭಿಪ್ರಾಯಪಡುತ್ತಾರೆ. ಕೊನೆಗೊಳ್ಳದ ಮತ್ತು ಉಪಯೋಗರಹಿತ ಟಿ.ವಿ. ಚರ್ಚೆಗಳ ಇಂದಿನ ದಿನಗಳಲ್ಲಿ ಈ ಅಭಿಪ್ರಾಯ ಬಲಗೊಳ್ಳುತ್ತಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಸಹ ಪ್ರಚಾರ ಪ್ರಮುಖರಾದ ಜೆ. ನಂದಕುಮಾರ್ ಅವರ ಅಭಿಪ್ರಾಯದಂತೆ ನಾರದ ಮುನಿಗಳ ಪ್ರಸ್ತುತತೆ ಸ್ವರಾಜ್ಯ/ಸುರಾಜ್ಯ, ಪತ್ರಿಕೋದ್ಯಮ, ಸಂವಹನ, ಸಂಪರ್ಕ ಇವುಗಳ ಸಂಬಂಧೀ ಚರ್ಚೆಯಲ್ಲಿ ಮಹತ್ವದ್ದಾಗಿದೆ. ವಸಾಹತು ಮನಃಸ್ಥಿತಿಯಿಂದ ಹೊರಬರಲು, ಅವ್ಯವಸ್ಥೆಯ ರಾಜ್ಯ ವ್ಯವಸ್ಥೆಯನ್ನು ಸರಿಪಡಿಸಲು, ಅವನತಿಗಿಳಿದಿರುವ ಪತ್ರಿಕಾ ಧರ್ಮವನ್ನು ಪುನಃ ಸ್ಥಾಪಿಸಲು ನಾರದ ಮುನಿಗಳು ಇಂದು ಎಂದಿಗಿಂತಲೂ ಪ್ರಸ್ತುತವಾಗಿದ್ದಾರೆ.





# ಸಾಧನೆಯ ಹಾದಿ

ನಿಜವಾದ ವಿದ್ಯೆ ಮನುಷ್ಯನಿಗೆ ಆಲೋಚನೆ ಮಾಡುವುದನ್ನು ಕಲಿಸುತ್ತದೆ ಎಂಬ ಮಾತೊಂದಿದೆ. ಅಂದರೆ ಮನುಷ್ಯ ಆಲೋಚನೆಗೆ ಇಳಿದಾಗ ಮಾತ್ರ ಅವನಿಗೆ ಬದುಕಿನ ದಾರಿ ಗೋಚರಿಸುತ್ತದೆ. ಈ ಮಾತನ್ನು ನಂಬಿ ನಡೆದ ಸಾಧಕರ ಕಿರು ಪರಿಚಯ ಇಲ್ಲಿದೆ.

## ತೆಮ್ಸುಟುಲಾ ಇಮ್ಸಾಂಗ್

ಪ್ರಧಾನಿ ನರೇಂದ್ರ ಮೋದಿ ಅವರು ಕೆಲ ತಿಂಗಳ ಹಿಂದೆ ಕೆನಡಾ ಪ್ರವಾಸಕ್ಕೆ ಹೋಗಿದ್ದರು. '84 ಘಾಟ್‌ಗಳಿರುವ ವಾರಾಣಸಿಯಲ್ಲಿ ಯುವತಿಯೊಬ್ಬಳು ತಂಡ ಕಟ್ಟಿಕೊಂಡು ಗಲೀಜನ್ನು ಸ್ವಚ್ಛ ಮಾಡುವ ಕಾಯಕದಲ್ಲಿ ನಿರತರಾಗಿದ್ದಾರೆ, ಅವರಿಗೆ ನನ್ನ ಧನ್ಯವಾದಗಳು' ಎಂದು ಅಲ್ಲಿ ಮಾಡಿದ ಭಾಷಣದಲ್ಲಿ ಹೇಳಿದ್ದರು. ಈ ಶಹಬ್ಬಾಸ್‌ಗಿರಿ ಗಿಟ್ಟಿಸಿಕೊಂಡ ಯುವತಿ ಇಂದು ಸ್ವಚ್ಛತಾ ಅಭಿಯಾನದ ಐಕಾನ್ ಆಗಿದ್ದಾರೆ. ಅವರೇ ನಾಗಾಲ್ಯಾಂಡ್ ಮೂಲದ ತೆಮ್ಸುಟುಲಾ ಇಮ್ಸಾಂಗ್.

34 ವರ್ಷದ ಇಮ್ಸಾಂಗ್ ಶಾಲಾ ದಿನಗಳಲ್ಲೇ ಸಮಾಜಮುಖಿ ಮತ್ತು ಸಮುದಾಯ ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಕಾಲೇಜು ದಿನಗಳಲ್ಲಿ ಎನ್‌ಎಸ್‌ಎಸ್, ಎಸಿಸಿಗೆ ಸೇರಿಕೊಂಡು ಸ್ವಚ್ಛತಾ ಅಭಿಯಾನದಲ್ಲಿ ಸಕ್ರಿಯ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದರು.

ಕಾಲೇಜು ದಿನಗಳಲ್ಲಿ ತಿಂಗಳಿಗೆ ಎರಡು ಸಲ ಗೆಳೆಯರ ಜೊತೆ ಸೇರಿ ಕಾಲೇಜು ಆವರಣವನ್ನು ಸ್ವಚ್ಛ ಮಾಡುತ್ತಿದ್ದರು. ಉನ್ನತ ವ್ಯಾಸಂಗಕ್ಕಾಗಿ ದೆಹಲಿಗೆ ಬಂದ ಬಳಿಕವೂ ಸ್ವಚ್ಛತಾ ಕಾರ್ಯ ಮುಂದುವರಿಸಿದ್ದರು. ಜೆಎನ್‌ಯು ವಿಶ್ವವಿದ್ಯಾಲಯದಲ್ಲಿ ಮಾನವ ಹಕ್ಕುಗಳ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಗೆಳೆಯರ ಜೊತೆ ದೆಹಲಿಯಿಂದ ವಾರಾಣಸಿಗೆ ಬಂದು 'ಸಾಕಾರ್' ಎಂಬ ಸ್ವಯಂ ಸೇವಾ ಸಂಸ್ಥೆ ಸ್ಥಾಪಿಸಿದರು. ಅಲ್ಲಿ ಯುವಜನರು ಹಳ್ಳಿ ಬಿಟ್ಟು ಹೋಗದಂತೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡರು.

ಹಳ್ಳಿಗಳಲ್ಲಿ ಉದ್ಯೋಗಾವಕಾಶಗಳು ಲಭ್ಯವಿಲ್ಲವಾದ್ದರಿಂದ ಯುವಕರು ನಗರಗಳಿಗೆ ವಲಸೆ ಹೋಗುವುದು ಅನಿವಾರ್ಯ. ಹಾಗಾಗಿ ಇವರ ಜಾಗೃತಿ ಯೋಜನೆ ಹಳ್ಳ ಹಿಡಿಯಿತು. ನಂತರ ಇಮ್ಸಾಂಗ್ ನಾಗಾಲ್ಯಾಂಡ್‌ಗೆ ಮರಳಿದರು. ಅಲ್ಲಿ ಊರಿನವರ ಜೊತೆ ಸೇರಿ ಸ್ವಚ್ಛತಾ ಕಾರ್ಯವನ್ನು ಮುಂದುವರಿಸಿದರು. ಗೆಳತಿಯೊಬ್ಬರು ವಾರಾಣಸಿ ಘಾಟ್‌ಗಳನ್ನು ಸ್ವಚ್ಛಗೊಳಿಸುವ ಐಡಿಯಾ ಕೊಟ್ಟರು. ತಡ ಮಾಡದೇ ವಾರಾಣಸಿಗೆ ಬಂದು, ನಿಂತುಹೋಗಿದ್ದ ಸಾಕಾರ್ ಸಂಸ್ಥೆಗೆ ಮರುಜನ್ಮ ನೀಡಿ ಸ್ವಚ್ಛತಾ ಆಂದೋಲನಕ್ಕೆ ಮುಂದಡಿ ಇಟ್ಟರು. ವಾರಾಣಸಿಯಲ್ಲಿ ಸುಮಾರು 60 ಘಾಟ್‌ಗಳನ್ನು ಸಂಪೂರ್ಣ ಸ್ವಚ್ಛಗೊಳಿಸಿದ್ದಾರೆ.

ಪ್ರವಾಸಿಗರು ಹಾಗೂ ಭಕ್ತರಲ್ಲಿ ಜಾಗೃತಿ ಮೂಡಿಸುವ ಮೂಲಕ ಕಸಮುಕ್ತ ಘಾಟ್‌ಗಳನ್ನಾಗಿ ರೂಪಿಸಿದ್ದಾರೆ. ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಂಡರೆ ನಾವು ಸಹ ಆರೋಗ್ಯವಾಗಿ ಬದುಕಬಹುದು ಎನ್ನುತ್ತಾರೆ ಇಮ್ಸಾಂಗ್.

## ಉಮೇಶ್ ಮಲ್ಹೋತ್ರ

ರಾಜ್ಯದ ಗ್ರಾಮೀಣ ಮತ್ತು ಬಡ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಕಾಳಜಿಯೊಂದಿಗೆ ರಾಜ್ಯದಲ್ಲಿ 200ಕ್ಕೂ ಹೆಚ್ಚು ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯುವ ಮೂಲಕ ಉಮೇಶ್ ಮಲ್ಹೋತ್ರ ಶಿಕ್ಷಣ ಕಾಯಕಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ.

ಬೆಂಗಳೂರಿನವರಾದ ಉಮೇಶ್ ಐಐಟಿ ಪದವೀಧರರು. ಅಮೆರಿಕದಲ್ಲಿ ಕೆಲಸ ಮಾಡುತ್ತಿದ್ದ ಉಮೇಶ್‌ಗೆ ಶಿಕ್ಷಣ ಕ್ಷೇತ್ರದಲ್ಲಿ ಹಿರಿದಾದ ಸಾಧನೆ ಮಾಡಬೇಕು ಎಂಬ ಹಂಬಲದೊಂದಿಗೆ ಭಾರತಕ್ಕೆ ಮರಳಿದರು. ಮಕ್ಕಳಿಗೆ ಒತ್ತಡರಹಿತವಾಗಿ ಶಿಕ್ಷಣ ಕಲಿಸಬೇಕು ಎಂಬುದನ್ನು ಉಮೇಶ್ ಅರಿತಿದ್ದರು. ಹಾಗಾಗಿ ಅವರು ಆಟದ ಜೊತೆ ಜೊತೆಗೆ ಶಿಕ್ಷಣ ನೀಡುವ ಸಲುವಾಗಿ 'ಹಿಪ್ಪೋಕ್ಯಾಂಪಸ್ ಲರ್ನಿಂಗ್ ಸೆಂಟರ್' (ಎಚ್‌ಎಲ್‌ಸಿ) ಆರಂಭಿಸಿದರು. ಎರಡೂವರೆ ವರ್ಷದ ಮಕ್ಕಳಿಂದ ಹಿಡಿದು 6 ವರ್ಷದ ಮಕ್ಕಳವರೆಗೂ ಎಚ್‌ಎಲ್‌ಸಿಯಲ್ಲಿ ಶಿಕ್ಷಣ ನೀಡಲಾಗುತ್ತಿದೆ.

ಗಣಿತ, ಇಂಗ್ಲಿಷ್ ಮತ್ತು ಕನ್ನಡವನ್ನು ಮಾತ್ರ ಇಲ್ಲಿ ಕಲಿಸಲಾಗುತ್ತದೆ. ಈ ಕೇಂದ್ರಗಳಲ್ಲಿ 11 ಸಾವಿರ ವಿದ್ಯಾರ್ಥಿಗಳು ಕಲಿಕೆಯಲ್ಲಿ ನಿರತರಾಗಿದ್ದಾರೆ ಎನ್ನುತ್ತಾರೆ ಉಮೇಶ್. ಶೇ. 85ರಷ್ಟು ಮಕ್ಕಳು ನಿರರ್ಗಳವಾಗಿ ಇಂಗ್ಲಿಷ್ ಮತ್ತು ಕನ್ನಡವನ್ನು ಮಾತನಾಡುತ್ತಾರೆ ಎನ್ನುತ್ತಾರೆ ಅವರು.

ಪ್ರಸ್ತುತ ರಾಜ್ಯದಲ್ಲಿ 285 ಪೂರ್ವ ಪ್ರಾಥಮಿಕ ಶಾಲೆಗಳು ನಡೆಯುತ್ತಿವೆ. ಮುಂದಿನ ದಿನಗಳಲ್ಲಿ ಮಹಾರಾಷ್ಟ್ರದಲ್ಲೂ ಶಾಲೆಗಳನ್ನು ತೆರೆಯುವ ಗುರಿಯನ್ನು ಉಮೇಶ್ ಹೊಂದಿದ್ದಾರೆ. ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಅನೌಪಚಾರಿಕ ಶಿಕ್ಷಣ ನೀಡುವುದರಿಂದ ಕ್ರಿಯಾಶೀಲರಾಗಿ ಬೆಳೆಯುತ್ತಾರೆ. ಇದರಿಂದ ಅವರ ಭವಿಷ್ಯ ಉತ್ತಮವಾಗಿರುತ್ತದೆ ಎಂದು ಉಮೇಶ್ ಹೇಳುತ್ತಾರೆ. www.hippocampuslearningcenter.org



## ದೆಹಲಿ ವಿ.ವಿ. ಪಠ್ಯಪುಸ್ತಕ: ಭಗತ್ ಸಿಂಗ್ 'ಕ್ರಾಂತಿಕಾರಿ ಭಯೋತ್ಪಾದಕ'!

ಸ್ವಾತಂತ್ರ್ಯ ಹೋರಾಟಗಾರ ಭಗತ್‌ಸಿಂಗ್ ಅವರನ್ನು ದೆಹಲಿ ವಿಶ್ವವಿದ್ಯಾಲಯದ ಪಠ್ಯಪುಸ್ತಕದಲ್ಲಿ 'ಕ್ರಾಂತಿಕಾರಿ ಭಯೋತ್ಪಾದಕ' ಎಂದು ಕರೆದಿರುವುದು ಹೊಸ ವಿವಾದಕ್ಕೆ ಕಾರಣವಾಗಿದೆ. ಈ ತಪ್ಪನ್ನು ಸರಿಪಡಿಸುವಂತೆ ಕೋರಿ ಭಗತ್ ಸಿಂಗ್ ಕುಟುಂಬದ ಸದಸ್ಯರು ದೆಹಲಿ ವಿ.ವಿ ಅಧಿಕಾರಿಗಳು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವನ್ನು ಆಗ್ರಹಿಸಿದ್ದಾರೆ. ಪ್ರಮುಖ ಇತಿಹಾಸಕಾರರಾದ ಬಿಪಿನ್ ಚಂದ್ರ ಮತ್ತು ಮೃದುಲಾ ಮುಖರ್ಜಿ ಅವರು ಬರೆದಿರುವ 'ಭಾರತದ ಸ್ವಾತಂತ್ರ್ಯ ಹೋರಾಟ' ಎಂಬ ಪುಸ್ತಕದ 20ನೇ ಅಧ್ಯಾಯದಲ್ಲಿ ಭಗತ್ ಸಿಂಗ್ ಅಲ್ಲದೆ, ಚಂದ್ರಶೇಖರ್ ಆಜಾದ್, ಸೂರ್ಯ ಸೇನ್ ಮತ್ತು ಇತರರನ್ನು 'ಕ್ರಾಂತಿಕಾರಿ ಭಯೋತ್ಪಾದಕರು' ಎಂದು ಬಣ್ಣಿಸಲಾಗಿದೆ. 'ಚಿತ್ತಗಾಂಗ್ ಚಳವಳಿ' ಮತ್ತು ಸ್ಯಾಂಡರ್ಸ್ ಹತ್ಯೆಯನ್ನು ಈ ಪಠ್ಯಪುಸ್ತಕದಲ್ಲಿ 'ಭಯೋತ್ಪಾದಕ ಕೃತ್ಯ' ಎಂದು ಹೇಳಲಾಗಿದೆ. ಭಗತ್ ಸಿಂಗ್ ಕುಟುಂಬದ ಸದಸ್ಯರು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಅವರಿಗೆ ಪತ್ರ ಬರೆದಿದ್ದು, 'ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿ, ಪಠ್ಯ ಪುಸ್ತಕದಲ್ಲಿ ತಿದ್ದುಪಡಿ ತರಬೇಕು' ಎಂದು ಒತ್ತಾಯಿಸಿದ್ದಾರೆ. ಭಗತ್ ಅವರನ್ನು ಗಲ್ಲಿಗೇರಿಸಿದ್ದ ಬ್ರಿಟಿಷರು ಕೂಡಾ ತಮ್ಮ ತೀರ್ಪಿನಲ್ಲಿ ಅವರಿಗೆ ನೈಜ ಕ್ರಾಂತಿಕಾರಿ ಎಂಬ ಪದ ಬಳಸಿದ್ದರು. ಆದರೆ ಈ ಪಠ್ಯಪುಸ್ತಕದಲ್ಲಿ ಕ್ರಾಂತಿಕಾರಿಗಳಿಗೆ . ಭಯೋತ್ಪಾದಕರು ಎಂಬ ಪದ ಬಳಸಿ ವಿವಾದ ಹುಟ್ಟುಹಾಕಿರುವುದು ದುರದೃಷ್ಟ' ಎಂದು ಭಗತ್‌ಅವರ ಸೋದರಳಿಯ ಅಭಯ್ ಸಿಂಗ್ ಸಂಧು ಹೇಳಿದ್ದಾರೆ.



## ಉದ್ಯೋಗ ಅರಸಿ ಹೋದ ತಮಿಳಿಗ ಈಗ ಗವರ್ನರ್

**ಹೊಟ್ಟೆಪಾಡಿಗಾಗಿ ಪಪುವಾ ನ್ಯೂಗಿನಿಗೆ(ಪಿಎನ್‌ಜಿ) ತೆರಳಿದ್ದ ತಮಿಳುನಾಡಿನ ಶಿವಕಾಶಿ ಮೂಲದ ಶಶೀಂದ್ರನ್ ಮುತ್ತುವೇಲ್ (41), ಈಗ ಯೂರೋಪಿನ ವೆಸ್ಟ್ ನ್ಯೂ ಬ್ರಿಟನ್ ಪ್ರಾಂತ್ಯದ ಗವರ್ನರ್ ಆಗಿ ಆಯ್ಕೆಯಾಗಿದ್ದಾರೆ. ಸುಮಾರು 20 ವರ್ಷಗಳ ಹಿಂದೆ (1997) ಜೀವನೋಪಾಯಕ್ಕಾಗಿ ಕೆಲಸ ಅರಸುತ್ತಿದ್ದಾಗ ಉದ್ಯೋಗದ ಜಾಹೀರಾತು ನೋಡಿ ಇಲ್ಲಿಗೆ ಬಂದಿದ್ದ ಶಶೀಂದ್ರನ್ ಈಗ ದೇಶದ ಒಂದು ಪ್ರಾಂತ್ಯದ ಹೊಣೆಯನ್ನೇ ಹೊತ್ತುಕೊಂಡಿದ್ದಾರೆ. ಶಶೀಂದ್ರನ್, ಚಿಲ್ಲರೆ ಮಾರಾಟ ಅಂಗಡಿಯ ವ್ಯವಸ್ಥಾಪಕನ ಕೆಲಸಕ್ಕಾಗಿ ಪಿಎನ್‌ಜಿಗೆ ಬಂದಿದ್ದರು. ಕೌಶಲ ಹೊಂದಿರುವ ವಲಸಿಗನಾಗಿ ಇಲ್ಲಿಂದ ನೇರವಾಗಿ ಆಸ್ಟ್ರೇಲಿಯಾಕ್ಕೆ ವಲಸೆ ಹೋಗಬಹುದು ಎನ್ನುವುದು ಅವರ ಗುರಿಯಾಗಿತ್ತು. ಆದರೆ ಅಂಗಡಿ ಮುಚ್ಚಿಹೋಗಿದ್ದು ಅವರ ಬದುಕಿನ ದೆಸೆಯನ್ನು ಬದಲಿಸಿತು. ತಮ್ಮದೇ ಚಿಕ್ಕ ಚಿಲ್ಲರೆ ವ್ಯವಹಾರವೊಂದನ್ನು ಪ್ರಾರಂಭಿಸಿದ ಶಶೀಂದ್ರನ್, ಅದರ ಅನೇಕ ಶಾಖೆಗಳನ್ನು ಬೆಳೆಸಿದ್ದರು. ಈ ಮಧ್ಯೆ ಊರಿಗೆ ಬಂದು ಮದುವೆಯಾಗಿ ಮತ್ತೆ ಪಿಎನ್‌ಜಿಗೆ ತೆರಳಿದರು. ವ್ಯವಹಾರದಲ್ಲಿ ಬೆಳೆದು ಕ್ರಮೇಣ ಜನಪ್ರಿಯತೆ ಪಡೆದ ಅವರು 2007ರಲ್ಲಿ ದೇಶದ ಪೌರತ್ವ ಪಡೆದುಕೊಂಡರು. ತಮ್ಮದೇ ಪಕ್ಷ ಸ್ಥಾಪಿಸಿ, ಚುನಾವಣಾ ಕಣಕ್ಕಿಳಿದು 2009ರಲ್ಲಿ ವೆಸ್ಟ್ ನ್ಯೂ ಬ್ರಿಟನ್‌ನ ಗವರ್ನರ್ ಆಗಿ ಆಯ್ಕೆಯಾದರು. ಶಶೀಂದ್ರನ್ ತಮಿಳುನಾಡು ಕೃಷಿ ವಿಶ್ವವಿದ್ಯಾಲಯದಲ್ಲಿ ವಿಜ್ಞಾನ ಪದವಿ ಪೂರೈಸಿದ್ದರು.**

# ಹೈನು ಕೃಷಿಯಲ್ಲಿ ಯಶ ಕಂಡ ಸುನಂದಾ ಸೋಗಿ

ನೆಲದ ಮಾತು

ಮಾಡುವ ಮನಸ್ಸಿದ್ದರೆ, ಜೊತೆಗೊಂದಿಷ್ಟು ಉತ್ಸಾಹವಿದ್ದರೆ ಮಹಿಳೆ ಮನೆ ಒಳ–ಹೊರಗೂ ಸಮರ್ಥವಾಗಿ ನಿಭಾಯಿಸಬಲ್ಲಳು ಎಂಬುದಕ್ಕೆ ಉದಾಹರಣೆ ಹುಬ್ಬಳ್ಳಿಯ ಅಮರಗೋಳದ ಕೃಷಿ ಮಹಿಳೆ ಸುನಂದಾ ವಿರೂಪಾಕ್ಷಪ್ಪ ಸೋಗಿ.

ಇವರ ದುಡಿಮೆ ಬೆಳಿಗ್ಗೆ ಮನೆ ಬಿಟ್ಟರೆ ಸಂಜೆಯೊಳಗೆ ಮನೆ ಸೇರುವಂಥದ್ದಲ್ಲ; ಅದು ನಸುಕಿನಿಂದ ರಾತ್ರಿವರೆಗಿನ ನಿರಂತರ ದುಡಿಮೆ. ಮನೆಯ ಒಳ ಬಿಟ್ಟರೆ ಕೊಟ್ಟಿಗೆ, ಎರಡು ಕಿ.ಮೀ. ದೂರದ ಏಳೂವರೆ ಎಕರೆ ಹೊಲ ಇವರ ಕಾಯಕ ಕ್ಷೇತ್ರ. ಅದರಿಂದಲೇ ಚೆಲುವಾದ ಬದುಕು. ಅತ್ತೆ, ಮಾವ, ಗಂಡ, ಮೂವರು ಮಕ್ಕಳ ಜೊತೆಗಿನ ಸಂತೃಪ್ತ ಜೀವನ. ಸುನಂದಾ ಅವರ ಕೃಷಿ ಕಾಯಕ, ಹೈನುಗಾರಿಕೆ ನಿರ್ವಹಣೆ ಪರಿಗಣಿಸಿ ಕಳೆದ ಸೆಪ್ಟೆಂಬರ್‌ನಲ್ಲಿ ಧಾರವಾಡದಲ್ಲಿ ನಡೆದ ಕೃಷಿ ಮೇಳದಲ್ಲಿ ಕೃಷಿ ವಿಶ್ವವಿದ್ಯಾಲಯವು 'ಶ್ರೇಷ್ಠ ಯುವ ಕೃಷಿ ಮಹಿಳೆ' ಪುರಸ್ಕಾರ ನೀಡಿ ಗೌರವಿಸಿದೆ. ಅವರ ಸಾಧನೆ ಕಾಣಲು ಅವರ ಮನೆಯ ಕೊಟ್ಟಿಗೆ, ಹೊಲಕ್ಕೇ ಹೋಗಬೇಕು.



ಕೃಷಿ ಕುಟುಂಬದಲ್ಲೇ ಜನಿಸಿದ್ದರಿಂದ ಗಂಡನ ಮನೆಯಲ್ಲಿ ಕೃಷಿ ಕೆಲಸಕ್ಕೆ ಒಗ್ಗಿಕೊಳ್ಳಲು ಸುನಂದಾ ಅವರಿಗೆ ಕಷ್ಟವೆನಿಸಲಿಲ್ಲ. ಪಿಯುಸಿ ಓದಿರುವ ಅವರು ಕೃಷಿ ಕುರಿತ ಬರಹಗಳನ್ನು, ಹೈನುಗಾರಿಕೆ, ಕೃಷಿಯಲ್ಲಿ ಅಳವಡಿಸಿಕೊಂಡರು. ಹೈನುಗಾರಿಕೆ ಮತ್ತು ಹೊಲದಲ್ಲಿ ಕೃಷಿ ಎರಡೂ ಒಂದೇ ನಾಣ್ಯದ ಎರಡು ಮುಖಗಳು. ಒಂದನ್ನು ಬಿಟ್ಟು ಇನ್ನೊಂದಿಲ್ಲ ಎಂಬ ಸತ್ಯ ಅರಿತಿರುವ ಅವರು ಎರಡನ್ನೂ ಸಮವಾಗಿ ತೂಗಿಸಿಕೊಂಡು ಹೋಗುತ್ತಿದ್ದಾರೆ. ಈಗವರ ಕೊಟ್ಟಿಗೆಯಲ್ಲಿ ನಾಲ್ಕು ಎಚ್‌ಎಫ್ ಆಕಳು, ಒಂದು ಎಮ್ಮೆ, ಐದು ಕರುಗಳು ಇದ್ದು, ಎರಡು ಹೊತ್ತಿನಿಂದ 20 ಲೀಟರ್ ಹಾಲು ಹಿಂಡುತ್ತಾರೆ. ಮನೆಗೆ ಬಳಸಿಕೊಂಡು ಉಳಿದದ್ದನ್ನು ಡೇರಿಗೆ ಹಾಕುತ್ತಾರೆ. ಸೆಗಣಿಯಿಂದ ಮನೆಗೆ ಗೋಬರ್ ಗ್ಯಾಸ್ ವ್ಯವಸ್ಥೆ ಹೊಂದಿದ್ದಾರೆ. ಒಂದಷ್ಟು ಸೆಗಣಿಯನ್ನು ಭರಣಿ ತಟ್ಟಿ ಸ್ನಾನಕ್ಕಾಗಿ ಒಲೆಗೆ ಒಟ್ಟಲು ಬಳಸುತ್ತಾರೆ. ಒಟ್ಟಿನಲ್ಲಿ ಇವರಿಗೆ ಒಲೆ ಉರಿಸಲು ಕಟ್ಟಿಗೆಯ ಪ್ರಮೇಯವೇ ಇಲ್ಲ. ಹೈನುಗಾರಿಕೆಯಿಂದ ಲಭ್ಯ ಗೊಬ್ಬರವನ್ನು ತಮ್ಮದೇ ಹೊಲಕ್ಕೇ ಸಂಪೂರ್ಣವಾಗಿ ಬಳಸಿಕೊಳ್ಳುತ್ತಾರೆ.

ಅದೇ ರೀತಿ ಹೊಲದಲ್ಲಿ ಕೂಡ ಒಂದೇ ಕೃಷಿ ಬೇಸಾಯವನ್ನು ನೆಚ್ಚಿಕೊಂಡಿಲ್ಲ. ಕುಸುಬಿ, ಹತ್ತಿ, ಗೋಧಿ, ಕಡಲೆ, ಗೋವಿನ ಜೋಳ, ಹೆಸರು, ಉದ್ದು, ಆಲೂಗಡ್ಡೆ, ಕಾಯಿಪಲ್ಲೆ ಬೆಳೆಯುತ್ತಾರೆ. ಅಡುಗೆಗಾಗಿ ಅಗತ್ಯ ಎಲ್ಲ ತರಕಾರಿಗಳನ್ನೂ ಮನೆಯಲ್ಲೇ ಬೆಳೆದುಕೊಂಡು, ಮಾರುಕಟ್ಟೆಗೂ ಹಾಕುತ್ತಾರೆ. ಜೋಳದ ದಂಟು, ಹೊಟ್ಟುಗಳನ್ನು ದನಕರುಗಳಿಗೆ ಮೇವಾಗಿ ಬಳಸುತ್ತಾರೆ. ಅವರ ಮನೆ ಹಿಂದೆ ಮನೆ ಎತ್ತರದಷ್ಟು ಮೇವಿನ ಮೂರು ಬಣವಿಗಳು ಇವೆ. ಅವರ ಹೈನುಗಾರಿಕೆಗೆ ಅವು ಒಂದು ವರ್ಷದ ಮೇವು. ಕುಸುಬಿ ಎಣ್ಣೆಯನ್ನು ಮನೆ ಬಳಕೆಗಾಗುವಷ್ಟು ಬಳಸಿಕೊಂಡು ಉಳಿದ ಎಣ್ಣೆಯನ್ನು ಮಾರುತ್ತಾರೆ. ಅದರಿಂದ ಬರುವ ಹಿಂಡಿ ಹಾಲು ಹಿಂಡುವ ಆಕಳಿಗೆ ಆಹಾರ.

ಅವರ ಕೃಷಿ ಮಳೆಯಾಧಾರಿತವಾದ್ದರಿಂದ ಮಳೆ ಕೈಕೊಟ್ಟರೆ ಕೃಷಿಯಲ್ಲಿ ಹಿನ್ನಡೆ. ಆದ್ದರಿಂದ ಅವರೀಗ ತಮ್ಮ ಜಮೀನಿನಲ್ಲಿ ಕೃಷಿಭಾಗ್ಯ ಹೊಂಡ ನಿರ್ಮಿಸುವ ಚಿಂತನೆಯಲ್ಲಿದ್ದಾರೆ. ಕೃಷಿಯಲ್ಲಿ ಆಧುನಿಕ ಯಂತ್ರೋಪಕರಣಗಳನ್ನೂ ಅಳವಡಿಸಿಕೊಂಡಿದ್ದಾರೆ. ಕೃಷಿ ಕಾಯಕವನ್ನು ಸುನಂದಾ ಅವರು ಪತಿ ವಿರೂಪಾಕ್ಷಪ್ಪ ಸೋಗಿ ಜೊತೆಗೂಡಿ ನಿರ್ವಹಿಸುತ್ತಾರೆ. ಆಗಾಗ ಹೊಸ ಹೊಸ ಕೃಷಿ ಪ್ರಯೋಗಗಳನ್ನು ಅಳವಡಿಸಿಕೊಳ್ಳುತ್ತಾರೆ. ಸಂಪರ್ಕಕ್ಕೆ: 9481728391.

ಸಂಪಾದಕೀಯ ಸಹಕಾರ ಶ್ರೀಧರನ್, ಶ್ರೀಹರ್ಷ ಪೆರ್ಲ, ಶ್ರೀವತ್ಸ ಸಿ.ಎಂ., ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಪ್ರತಾಪ ಕೊಡಂಚ, ಶಶಾಂಕ್ ಹತ್ವಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

98 ವರ್ಷಗಳ ಹಿಂದೆ ಪ್ಯಾಲೆಸ್ಟೈನ್‌ನ ಯುದ್ಧಭೂಮಿಯಲ್ಲಿ ಹುತಾತ್ಮರಾದ ವೀರಯೋಧನನ್ನು ಹರಿಯಾಣದ ಧಕ್ಲಾ ಗ್ರಾಮದ ಜನರು ಇತ್ತೀಚೆಗೆ ವಿಶಿಷ್ಟವಾಗಿ ಸ್ಮರಿಸಿದರು. ಧಕ್ಲಾ ಗ್ರಾಮಕ್ಕೆ ಸೇರಿದ ಬದ್ಲೂ ಸಿಂಗ್ ಎಂಬ ಯೋಧ ಮೊದಲ ವಿಶ್ವಯುದ್ಧದ ವೇಳೆ ಮೃತಪಟ್ಟಿದ್ದರು. ಅವರ ಸಮಾಧಿ ಈಜಿಪ್ಟ್‌ನ ಕೈರೊದಲ್ಲಿದೆ. ಇದೀಗ (ಮೇ 3ರಂದು) ಅವರ ಸಮಾಧಿಯಿರುವ ಸ್ಥಳದಿಂದ ಮಣ್ಣನ್ನು ಹುಟ್ಟೂರು ಧಕ್ಲಾಗೆ ತರಲಾಗಿದೆ. ಹರಿಯಾಣ ಸಚಿವ ಓಂಪ್ರಕಾಶ್ ಧನ್‌ಖಡ್ ಅವರ ಪ್ರಯತ್ನದಿಂದಾಗಿ ಮಣ್ಣು ಭಾರತಕ್ಕೆ ತರಲಾಗಿದೆ. ಧನ್‌ಖಡ್ ನೇತೃತ್ವದಲ್ಲಿ ಹರಿಯಾಣ ಸರ್ಕಾರದ ನಿಯೋಗವೊಂದು ಜಲ ಸಂರಕ್ಷಣೆ ಕುರಿತ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಈಜಿಪ್ಟ್‌ಗೆ ತೆರಳಿದೆ. ಧನ್‌ಖಡ್ ಹಾಗೂ ಈಜಿಪ್ಟ್‌ನಲ್ಲಿರುವ ಭಾರತದ ರಾಯಭಾರಿ ಸಂಜಯ್ ಭಟ್ಟಾಚಾರ್ಯ ಅವರು ಕೈರೊದ ಹೆಲಿಪೊಲಿಸ್ ಯುದ್ಧ ಸ್ಮಾರಕಕ್ಕೆ ತೆರಳಿ ಹುತಾತ್ಮ ಯೋಧನಿಗೆ ಗೌರವ ನಮನ ಸಲ್ಲಿಸಿದ್ದಾರೆ.



ಭದ್ರತೆಯ ಆತಂಕದ ನಡುವೆಯೇ ಪಾಕಿಸ್ತಾನದಲ್ಲಿನ ಸಿಖ್ ಸಮುದಾಯ 73 ವರ್ಷಗಳ ನಂತರ ಇಲ್ಲಿನ ಗುರುದ್ವಾರದ ಬಾಗಿಲನ್ನು ತೆರೆದು ಪ್ರಾರ್ಥನೆಗೆ ಅವಕಾಶ ಕಲ್ಪಿಸಿದೆ. ಭಯೋತ್ಪಾದಕರು ಈ ಪ್ರದೇಶದಲ್ಲಿ ದಾಳಿ ನಡೆಸುವ ಸಾಧ್ಯತೆ ಇರುವುದರಿಂದ ಸಿಖ್ ಸಮುದಾಯದವರು ಆತಂಕಗೊಂಡಿದ್ದಾರೆ. 300 ವರ್ಷ ಹಳೆಯದಾದ ಈ ಗುರುದ್ವಾರದ ಸುತ್ತ 24 ಗಂಟೆಗಳ ಕಾಲ ಭದ್ರತೆಗಾಗಿ ಪೊಲೀಸರನ್ನು ನಿಯೋಜಿಸಿದ್ದು, ಪ್ರತಿಯೊಬ್ಬರ ಚಲನವಲನದ ಮೇಲೆ ನಿಗಾ ವಹಿಸಲಾಗುತ್ತಿದೆ. 'ಯಾವುದೇ ರೀತಿಯ ಆತಂಕವಿಲ್ಲದೆ ಗುರುದ್ವಾರಕ್ಕೆ ಬರಲು ಭದ್ರತೆ ಅಗತ್ಯ' ಎಂದು ಭದ್ರತಾ ಮುಖ್ಯಸ್ಥ ಗುರ್ಪಾಲ್ ಸಿಂಗ್ ತಿಳಿಸಿದರು.

**ನೇಪಾಳದಲ್ಲಿ ಹೊಸ ಸಂವಿಧಾನ ಜಾರಿಯಾದ ನಂತರ ಅಲ್ಲಿನ ಪುರುಷರನ್ನು ಮದುವೆಯಾದ 3,600ಕ್ಕೂ ಹೆಚ್ಚು ಭಾರತೀಯ ಮಹಿಳೆಯರಿಗೆ ನೇಪಾಳ ಸರ್ಕಾರ ಪೌರತ್ವ ನೀಡಿದೆ. 3,672 ವಿದೇಶಿ ಮಹಿಳೆಯರಿಗೆ ಪೌರತ್ವ ನೀಡಲಾಗಿದೆ. ಇದರಲ್ಲಿ ಬಹುಪಾಲು ಭಾರತೀಯರಾಗಿದ್ದಾರೆ. ಹೊಸ ಸಂವಿಧಾನದ ಕಲಂ 11(6) ಅನ್ವಯ ನೇಪಾಳದ ಪುರುಷನನ್ನು ಮದುವೆಯಾಗುವ ವಿದೇಶಿ ಮಹಿಳೆಗೆ ಸಹಜವಾಗಿಯೇ ಪೌರತ್ವ ದೊರೆಯಲಿದೆ' ಎಂದರು. ಹೊಸ ಸಂವಿಧಾನ ಜಾರಿಯಾದ ನಂತರ 'ಮಾಧೇಶಿ'ಯಲ್ಲಿ ನಡೆದ ಚಳವಳಿ ಸಂದರ್ಭದಲ್ಲಿ ಪೌರತ್ವ ವಿಷಯ ಪ್ರಮುಖವಾಗಿ ಚರ್ಚೆಗೆ ಗ್ರಾಸವಾಗಿತ್ತು. ಭಾರತದ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಸಹ ಕಳೆದ ವರ್ಷ ಸೆ. 7ರಂದು ಸಂಸತ್ತಿನಲ್ಲಿ ಪೌರತ್ವ ವಿಷಯವನ್ನು ಪ್ರಸ್ತಾಪಿಸಿದ್ದರು.**



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಂತಾರಾಷ್ಟ್ರೀಯ ಕಾರ್ಮಿಕ ದಿನವಾದ ಮೇ 1ರಂದು ಉತ್ತರ ಪ್ರದೇಶದ ಬಲಿಯಾದಲ್ಲಿ 'ಪ್ರಧಾನಮಂತ್ರಿ ಉಜ್ವಲ ಯೋಜನೆ'ಗೆ ಚಾಲನೆ ನೀಡಿದರು. ಗ್ಯಾಸ್ ಸಬ್ಸಿಡಿ ತ್ಯಜಿಸುವಂತೆ ನರೇಂದ್ರ ಮೋದಿ ನೀಡಿದ ಕರೆ ನೀಡಿದ್ದರು. ಇದಕ್ಕೆ ಓಗೊಟ್ಟು 1.13 ಕೋಟಿ ಗ್ರಾಹಕರು ಅಡುಗೆ ಅನಿಲ ಸಬ್ಸಿಡಿ ತ್ಯಜಿಸಿದ್ದರು. ಇದರಿಂದ ಉಳಿತಾಯವಾಗಿರುವ ಹಣ ಬಳಸಿಕೊಂಡು ಕೇಂದ್ರ ಸರ್ಕಾರ 5 ಕೋಟಿ ಬಡ (ಬಿಪಿಎಲ್) ಕುಟುಂಬಗಳಿಗೆ ಉಚಿತ ಅಡುಗೆ ಅನಿಲ ಸಂಪರ್ಕ ನೀಡುವ ಸಲುವಾಗಿ 'ಉಜ್ವಲ ಯೋಜನೆ' ರೂಪಿಸಿದೆ. ಮೊದಲ ವರ್ಷ 1.5 ಕೋಟಿ ಬಿಪಿಎಲ್ ಕುಟುಂಬಗಳಿಗೆ ಸಂಪರ್ಕ ಸಿಗಲಿದೆ.

**ರಾಷ್ಟ್ರೀಯ ಹೆದ್ದಾರಿಯ ಅಕ್ಕಪಕ್ಕ ಮದ್ಯದ ಅಂಗಡಿ ತೆರೆಯಲು ಯಾರಿಗೂ ಪರವಾನಗಿ ನೀಡಬಾರದು ಎಂದು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ. ಕುಡಿದು ವಾಹನ ಚಾಲನೆ ಮಾಡಿ ಅಪಘಾತ ಸಂಭವಿಸಿದ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಸರ್ಕಾರ ಈ ಹೆಜ್ಜೆಯಿಟ್ಟಿದೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ಭಾರತದಲ್ಲಿ ನಡೆದಿರುವ ಸುಮಾರು 1.18 ಲಕ್ಷ ಅಪಘಾತ ಪ್ರಕರಣಗಳಿಗೆ ಕುಡಿದು ವಾಹನ ಚಾಲನೆ ಮಾಡಿರುವುದೇ ಕಾರಣ ಎಂಬುದು ತಿಳಿದುಬಂದಿದೆ.**



ಜಮ್ಮು ಮತ್ತು ಕಾಶ್ಮೀರದ ಮಾತಾ ವೈಷ್ಣೋದೇವಿ ಮಂದಿರಕ್ಕೆ ಭೇಟಿ ನೀಡುವ ಯಾತ್ರಾರ್ಥಿಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಪವಿತ್ರ ಗುಹಾಂತರ ದೇವಾಲಯಕ್ಕೆ ಈ ವರ್ಷದ ಮೊದಲ ಮೂರೂವರೆ ತಿಂಗಳಲ್ಲಿ 17.71 ಲಕ್ಷ ಯಾತ್ರಾರ್ಥಿಗಳು ಭೇಟಿ ನೀಡಿದ್ದಾರೆ. ಇದು ಕಳೆದ ವರ್ಷದ ಇದೇ ಅವಧಿಗಿಂತ ಎರಡು ಲಕ್ಷದಷ್ಟು ಹೆಚ್ಚು ಎಂದು ಅಧಿಕೃತ ದಾಖಲೆಗಳು ತಿಳಿಸಿವೆ. 2011ರಲ್ಲಿ ಮೊದಲ ಬಾರಿಗೆ ಯಾತ್ರಾರ್ಥಿಗಳ ಸಂಖ್ಯೆ ಒಂದು ಕೋಟಿಯನ್ನು ದಾಟಿತ್ತು. 2012ರಲ್ಲಿಯೂ 1.04 ಕೋಟಿ ಭಕ್ತರು ಬಂದಿದ್ದರು. ಆದರೆ 2013ರಲ್ಲಿ 15.47 ಲಕ್ಷ ಮಂದಿ ಭೇಟಿ ನೀಡಿದ್ದರೆ, 2014ರಲ್ಲಿ ಕೇವಲ 26,589 ಯಾತ್ರಾರ್ಥಿಗಳು ಭೇಟಿ ನೀಡಿದ್ದರು. 2015ರಲ್ಲಿ ಯಾತ್ರಾರ್ಥಿಗಳ ಸಂಖ್ಯೆ 70.7 ಲಕ್ಷಕ್ಕೆ ಏರಿಕೆಯಾಗಿತ್ತು.

**ಎನ್‌ಡಿಎ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಗಂಗಾ ನದಿ ಶುದ್ಧೀಕರಣ ಕಾರ್ಯ 2018ರ ಜುಲೈ ತಿಂಗಳಿಗೆ ಪೂರ್ಣಗೊಳ್ಳಲಿದ್ದು, ನದಿಯಲ್ಲಿ ಜಲ ಜೀವಗಳ ರಾಶಿಯೇ ಮತ್ತೆ ಮೈದಳೆಯುತ್ತದೆ ಎಂದು ಕೇಂದ್ರ ಜಲ ಸಂಪನ್ಮೂಲ ಇಲಾಖೆ ಸಚಿವೆ ಉಮಾಭಾರತಿ ಲೋಕಸಭೆಯಲ್ಲಿ ಹೇಳಿದ್ದಾರೆ. ಅಧಿವೇಶನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಗಂಗಾನದಿಯು 2018ರ ಜುಲೈಗೆ ಶುದ್ಧೀಕರಣಗೊಂಡು ಪುನರುಜ್ಜೀವನಗೊಳ್ಳಲಿದೆ. ಸಿಹಿನೀರಿನ ಡಾಲ್ಫಿನ್, ಆಮೆಗಳು, ಗೋಲ್ಡ್ ಫಿಶ್‌ಗಳು ಮತ್ತೆ ನದಿಯಲ್ಲಿ ಗೋಚರಿಸಲಿವೆ ಎಂದು ತಿಳಿಸಿದರು.**



## ಗುಜರಾತ್: ಮೇಲ್ಜಾತಿ ಬಡವರಿಗೂ ಮೀಸಲಾತಿ

ಮೀಸಲಾತಿ ವ್ಯಾಪ್ತಿಗೆ ಒಳಪಡದ ಜಾತಿಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗದಲ್ಲಿ ಶೇ. 10ರಷ್ಟು ಮೀಸಲಾತಿ ಕಲ್ಪಿಸಲು ಗುಜರಾತ್ ಸರ್ಕಾರ ಮುಂದಾಗಿದೆ. ವಾರ್ಷಿಕ 6 ಲಕ್ಷ ಮತ್ತು ಅದಕ್ಕಿಂತಲೂ ಕಡಿಮೆ ಆದಾಯ ಹೊಂದಿರುವ ಕುಟುಂಬಗಳ ಸದಸ್ಯರಿಗೆ ಈ ಮೀಸಲಾತಿ ದೊರೆಯಲಿದೆ. ಈ ಸಂಬಂಧ ಮೇ 1ರಂದು ಸುತ್ತೋಲೆ ಹೊರಡಿಸಲಾಗಿದ್ದು, ಮುಂದಿನ ಶೈಕ್ಷಣಿಕ ವರ್ಷದಿಂದ ಮೀಸಲಾತಿ ಅನ್ವಯವಾಗಲಿದೆ. ಒಟ್ಟು ಮೀಸಲಾತಿ ಪ್ರಮಾಣ ಶೇ. 50ರಷ್ಟನ್ನು ಮೀರಬಾರದು ಎಂದು ಸುಪ್ರೀಂಕೋರ್ಟ್ ಆದೇಶಿಸಿದೆ. ಗುಜರಾತ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಈಗಾಗಲೆ ಶೇ. 50ರಷ್ಟು ಮೀಸಲಾತಿ ನೀಡಲಾಗಿದೆ. ಈಗ ಹೆಚ್ಚುವರಿಯಾಗಿ ಶೇ. 10ರಷ್ಟು ಮೀಸಲಾತಿ ಘೋಷಿಸಿರುವುದು ಸುಪ್ರೀಂಕೋರ್ಟ್ ಆದೇಶದ ಸ್ಪಷ್ಟ ಉಲ್ಲಂಘನೆ. ಆದರೆ ಪರಿಸ್ಥಿತಿ ತೀರಾ ಗಂಭೀರವಾಗಿದೆ ಎಂಬುದನ್ನು ಸುಪ್ರೀಂಕೋರ್ಟ್‌ಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತೇವೆ. ಅಗತ್ಯ ಬಿದ್ದಲ್ಲಿ ಕಾನೂನು ಹೋರಾಟ ನಡೆಸುತ್ತೇವೆ ಎಂದು ಗುಜರಾತ್ ಸರ್ಕಾರ ತಿಳಿಸಿದೆ.

## ನಾಲುದ್ದದ ಸುದ್ದಿಗಳು

ಟಿಬೆಟಿಯನ್ ದೇಶಾಂತರ ಸರ್ಕಾರದ ಪ್ರಧಾನಿಯಾಗಿ ಲಾಬ್‌ಸಂಗ್ ಸಾಂಗೇ (48) ಅವರು ಸತತ ಎರಡನೇ ಅವಧಿಗೆ ಆಯ್ಕೆಯಾಗಿದ್ದಾರೆ. ಸಾಂಗೇ ತಮ್ಮ ಪ್ರತಿಸ್ಪರ್ಧಿ ಟಿಬೆಟಿಯನ್ ಸಂಸತ್‌ನ ಸ್ಪೀಕರ್ ಪೆಂಪಾ ತ್ಸೇರಿಂಗ್ ಅವರನ್ನು 9,012 ಮತಗಳ ಅಂತರದಿಂದ ಸೋಲಿಸಿದ್ದಾರೆ ಎಂದು ಟಿಬೆಟನ್ ಮುಖ್ಯ ಚುನಾವಣಾ ಆಯುಕ್ತ ಸೋನಂ ಚಾಪೆಲ್ ತಿಳಿಸಿದ್ದಾರೆ. ಪ್ರಧಾನಿ ಜೊತೆಗೆ 45 ಟಿಬೆಟನ್ ಸಂಸತ್‌ನ ಚುನಾಯಿತ ಸದಸ್ಯರನ್ನು ಇದೇ ಸಂದರ್ಭದಲ್ಲಿ ಘೋಷಿಸಲಾಯಿತು. 2011ರಲ್ಲಿ ಟಿಬೆಟನ್ ಧರ್ಮಗುರು ದಲೈಲಾಮ ಅವರು ರಾಜಕೀಯವಾಗಿ ನಿವೃತ್ತರಾದ ನಂತರ, ಸಾಂಗೇ ಮೊದಲ ಬಾರಿಗೆ ಪ್ರಧಾನಿಯಾಗಿ ಆಯ್ಕೆಯಾಗಿದ್ದರು. ಇದೀಗ 2016ರಲ್ಲಿ ನಡೆದ ಚುನಾವಣೆಯಲ್ಲಿ ಅವರು ಮತ್ತೊಮ್ಮೆ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ. ಡಾರ್ಜಿಲಿಂಗ್‌ನಲ್ಲಿ ಜನಿಸಿದ ಸಾಂಗೇ ಮೊದಲಿಗೆ ದೆಹಲಿಯಲ್ಲಿ ವಿದ್ಯಾಭ್ಯಾಸ ಮಾಡಿ, ನಂತರ ಅಮೆರಿಕದಲ್ಲಿ ಉನ್ನತ ವ್ಯಾಸಂಗ ಮಾಡಿದರು. ಹಾರ್ವರ್ಡ್ ಕಾನೂನು ಶಾಲೆಯ ಹಿರಿಯ ವಿದ್ಯಾರ್ಥಿ ಅವರಾಗಿದ್ದಾರೆ.

## ಸ್ವದೇಶೀ ಪಥದರ್ಶಕ ವ್ಯವಸ್ಥೆ ಆರಂಭ : ಇಸ್ರೋ ಮೈಲಿಗಲ್ಲು

ಭಾರತೀಯ ಪ್ರಾದೇಶಿಕ ಪಥದರ್ಶಕ ಉಪಗ್ರಹ ವ್ಯವಸ್ಥೆ (ಐಆರ್‌ಎನ್‌ಎಸ್‌ಎಸ್) ಸರಣಿಯ 7ನೇ ಉಪಗ್ರಹ 1ಜಿಯನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಏಪ್ರಿಲ್ 27ರಂದು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ. ಈ ಉಪಗ್ರಹ ಇನ್ನೊಂದು ತಿಂಗಳಲ್ಲಿ ಕಾರ್ಯಾಚರಣೆ ಆರಂಭಿಸಲಿದೆ. ಈ ಮೂಲಕ ಭಾರತ ಸ್ವಂತ ಪಥದರ್ಶಕ (ದಿಕ್ಸೂಚಿ) ವ್ಯವಸ್ಥೆ ಹೊಂದಿದ 5ನೇ ರಾಷ್ಟ್ರವಾಗಿದೆ. ಈ ಪಥದರ್ಶಕಕ್ಕೆ 'ನಾವಿಕ' ಎಂದು ಭಾರತ ಸರ್ಕಾರ ನಾಮಕರಣ ಮಾಡಿದೆ. ಇದು ನಾವಿಕರಿಗೆ ಸಲ್ಲಿಸಿದ ಗೌರವವಾಗಿದೆ. ಈ ಯೋಜನೆ ಕುರಿತು ಮೆಚ್ಚುಗೆ ಶ್ಲಾಘನೆ ವ್ಯಕ್ತಪಡಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, 'ಮುಂದಿನ ದಿನಗಳಲ್ಲಿ ನಾವು ನಮ್ಮ ರಸ್ತೆಗಳನ್ನು ನಮ್ಮದೇ ತಂತ್ರಜ್ಞಾನದ ಮೂಲಕ ಪತ್ತೆ ಮಾಡಬಹುದು. ಈ ತಂತ್ರಜ್ಞಾನದಿಂದ ನಮ್ಮ ಮೀನುಗಾರರು ಹಾಗೂ ಸಾಮಾನ್ಯ ಜನರಿಗೆ ಉಪಯೋಗವಾಲಿದೆ. ಇದು ದೇಶದ ಜನರಿಗೆ ನಮ್ಮ ವಿಜ್ಞಾನಿಗಳು ನೀಡಿದ ಅತ್ಯಮೂಲ್ಯ ಉಡುಗೊರೆ. ವಿಶ್ವ ಇದನ್ನು 'ನಾವಿಕ' ಎಂದು ಕರೆಯಲಿ ಎಂದರು. ಇದರಿಂದ ಸಮುದ್ರ ಮತ್ತು ನೆಲ ಎರಡರಲ್ಲೂ ಪಥದರ್ಶಕ ಸೇವೆ ಲಭ್ಯವಾಗಲಿದೆ. ಸಾರ್ಕ್ ರಾಷ್ಟ್ರಗಳಿಗೂ ಈ ಸೇವೆ ಒದಗಿಸುವಷ್ಟು ಈ ವ್ಯವಸ್ಥೆ ಸಮರ್ಥವಾಗಿದೆ ಎಂದು ಇಸ್ರೊ ತಿಳಿಸಿದೆ.



## ನಿಮ್ಮ ಫೋನ್ ನಿಧಾನವಾಗಿದೆಯೇ?




ಫೋನುಗಳನ್ನು ಖರೀದಿಸಿದ ಆರಂಭದಲ್ಲಿ ಅದು ತುಂಬ ಚೆನ್ನಾಗಿಯೇ ಕಾರ್ಯನಿರ್ವಹಿಸುತ್ತಿರುತ್ತದೆ. ಆದರೆ ಬಳಸಿದಂತೆಲ್ಲ ಅದು ಸ್ವಲ್ಪ ಸ್ವಲ್ಪವೇ ನಿಧಾನವಾಗಲು ಆರಂಭವಾಗುತ್ತದೆ. ನೀವು ಬಳಸುವ ಮೊಬೈಲ್ ದಕ್ಷತೆ, ನಿಮ್ಮ ಬಳಕೆಯ ಮೇಲೆ ಇದು ಅವಲಂಬಿತವಾಗಿರುತ್ತದೆ. ನಿಮ್ಮ ಮೊಬೈಲ್ ಯಾವುದೇ ಆದರೂ ಮೊಬೈಲ್ ನಿಧಾನ ಎಂಬ ಅಂಶ ನಿಮ್ಮ ಮನಸ್ಸಿನಲ್ಲಿ ಹಲವು ಬಾರಿ ಮೂಡಿರಬಹುದು. ಇಂತಹ ಸಂದರ್ಭದಲ್ಲಿ ಮೊಬೈಲ್ ಕಾರ್ಯಕ್ಷಮತೆ ಹೆಚ್ಚಿಸಿಕೊಳ್ಳಲು ಕೆಲವು ಸಲಹೆಗಳು ಇಲ್ಲಿವೆ.

**ಫೋನ್ ರೀಸ್ಟಾರ್ಟ್ ಮಾಡಿ:** ಕೆಲವು ಬಾರಿ ಮೊಬೈಲಿನಲ್ಲಿರುವ ಆಪ್‌ಗಳಲ್ಲಿನ ತೊಂದರೆಗಳು ಮೊಬೈಲನ್ನು ನಿಧಾನವಾಗಿಸಬಹುದು. ನೀವು ಯಾವುದೇ ಆಪ್ ಬಳಸದಿರುವಾಗಲೂ ಹಿನ್ನೆಲೆಯಲ್ಲಿಯೇ ಹಲವು ಆಪ್‌ಗಳು ಕಾರ್ಯ ನಿರ್ವಹಿಸುತ್ತಿರುತ್ತವೆ. ಮೊಬೈಲಿನ ಕೇವಲ ರಿಸ್ಟಾರ್ಟ್ ಒಂದರಿಂದ ಈ ಸಮಸ್ಯೆ ಪರಿಹಾರವಾಗುವ ಸಾಧ್ಯತೆಯಿರುತ್ತದೆ.

**ಅಗತ್ಯವಿಲ್ಲದ ಆಪ್‌ಗಳು:** ಹಲವು ಬಾರಿ ತಾತ್ಕಾಲಿಕವಾಗಿ ಹಾಕಿಕೊಂಡ ಒಂದು ಆಪ್ ನಿಮ್ಮ ಮೊಬೈಲುಗಳಲ್ಲಿ ಹಾಗೇ ಉಳಿದುಕೊಂಡಿರುತ್ತದೆ. ಇಂತಹ ಹಲವು ಕಿರು ತಂತ್ರಾಂಶಗಳು ಮೊಬೈಲಿನ ನಿಧಾನಗತಿಗೆ ಕಾರಣವಾಗಿರಬಹುದು. ಅವನ್ನೆಲ್ಲಾ ತೆಗೆದು ಹಾಕಿ. ಮೊಬೈಲ್ ಚುರುಕಾಗುತ್ತದೆ.

ಇನ್ನು ಫೋನ್ ಸೆಟ್ಟಿಂಗ್ಸ್‌ನಲ್ಲಿ ಫ್ಯಾಕ್ಟರಿ ರೀಸೆಟ್ ಎಂಬ ಆಯ್ಕೆಯನ್ನು ನೀಡಿರುತ್ತಾರೆ. ಫೋನ್ ರೀಸೆಟ್ ಮಾಡುವುದು ಅದನ್ನು ಪುನಃ ಹೊಸದಾಗಿ ಕೊಂಡ ಫೋನಿನ ಸ್ಥಿತಿಗೆ ತರುತ್ತದೆ. ಇದೊಂದು ತಾತ್ಕಾಲಿಕ ಪರಿಹಾರವಾಗಿದ್ದು, ನಿಮ್ಮ ಫೋನ್ ಅನ್ನು ಪುನಃ ಬಳಸಿದಾಗ, ಹಿಂದಿನ ಸ್ಥಿತಿಗೇ ಇದು ಮರಳಬಹುದು. ಆದರೆ ರೀಸೆಟ್ ಮಾಡಿದಾಗ ಫೋನಿನಲ್ಲಿರುವ ಮಾಹಿತಿಗಳು ಮತ್ತು ಕಡತಗಳೆಲ್ಲವೂ ಡಿಲೀಟ್ ಆಗುತ್ತದೆ. ಯಾವುದೇ ಮುಖ್ಯ ಮಾಹಿತಿಯನ್ನು ಬ್ಯಾಕಪ್ ಮಾಡಿ ತದನಂತರವೇ ಫೋನ್ ರೀಸೆಟ್ ಪ್ರಕ್ರಿಯೆ ನಡೆಸಿ.

ಸ್ಮಾರ್ಟ್‌ಫೋನ್ ಒಳಗೆ ಕಡಿಮೆ ಸ್ಥಳಾವಕಾಶವನ್ನು ಹೊಂದಿರಬಹುದು. ಇದೂ ಕೂಡ ಫೋನ್ ಸಮರ್ಪಕವಾಗಿ ಕೆಲಸಮಾಡಲು ತೊಂದರೆಯುಂಟು ಮಾಡಬಹುದು. ಈ ಸಮಯದಲ್ಲಿ ನಿಮ್ಮ ಫೈಲ್‌ಗಳನ್ನು ಎಸ್‌ಡಿ ಕಾರ್ಡ್‌ಗೆ ಸರಿಸುವುದು ಅಥವಾ ಬ್ಯಾಕಪ್ ಬಾಡಿ ಡಿಲೀಟ್ ಮಾಡುವುದು ನಿಮಗೆ ಸಹಾಯ ಮಾಡುತ್ತದೆ.

ನಿಮ್ಮ ತಂತ್ರಾಂಶಗಳು, ಮೊಬೈಲ್ ಆಪರೇಟಿಂಗ್ ಸಿಸ್ಟಮ್ ಮೊದಲಾದುವುಗಳನ್ನು ಅಪ್‌ಡೇಟ್ ಮಾಡಿಕೊಳ್ಳಿ. ಹಳೆಯ ಆವೃತ್ತಿಗಳಲ್ಲಿದ್ದ ದೋಷಗಳೇ ಅದನ್ನು ನಿಧಾನವಾಗಿಸಿರಬಹುದು.

ಮೊಬೈಲ್ ಮುಖ್ಯಪರದೆಯಲ್ಲಿ ದಿಡ್ಗೆಟ್ ಅಳವಡಿಸುವ ಅವಕಾಶವಿದ್ದರೆ ಅನಗತ್ಯವಾದುದನ್ನು ಬಳಸಬೇಡಿ. ಅದೇ ರೀತಿ ಎನಿಮೇಟೆಡ್ ವಾಲ್‌ಪೇಪರುಗಳ ಬಳಕೆ ಕೂಡ ಫೋನನ್ನು ನಿಧಾನವಾಗಿಸಬಹುದು.

ನಿಮ್ಮ ಮೆಮೊರಿ ಕಾರ್ಡ್ ನಿಧಾನವಾಗಿರಬಹುದು. ಉತ್ತಮ ಮೊಮೊರಿ ಕಾರ್ಡ್‌ಗೆ ಬದಲಾಯಿಸಿಕೊಳ್ಳುವ ಮೂಲಕ ಸ್ವಲ್ಪ ವೇಗ ಪಡೆದುಕೊಳ್ಳಬಹುದು.

ಕೆಲವು ಆಪ್‌ಗಳು ಹಿನ್ನೆಲಿಯಲ್ಲಿ ಚಾಲನೆಯಾಗುತ್ತಿದ್ದರೆ ಅದನ್ನು ನಿಲ್ಲಿಸುವ ಅವಕಾಶವಿರುತ್ತದೆ. ಅಲ್ಲದೆ ಹಿನ್ನೆಲೆಯಲ್ಲಿ ಡಾಟಾ ಸಿಂಕ್ ಆಗುವಂತೆ ಮತ್ತು ಚಲಾವಣೆ ಆಗುತ್ತಿರುವಂತೆ ಮಾಡಲು ಅದರಲ್ಲಿ ಆಯ್ಕೆಗಳನ್ನು ನೀಡಿರುತ್ತಾರೆ. ಅವುಗಳನ್ನು ಯೋಚಿಸಿ, ಅಗತ್ಯವಿದ್ದರೆ ಮಾತ್ರ ಬಳಸಿ ನಿಮ್ಮ ಫೋನ್ ಚುರುಕಾಗಿಯೇ ಇರುವಂತೆ ನೋಡಿಕೊಳ್ಳಬಹುದು.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17

15-5-2016



# ಜನಕಲ್ಯಾಣದ ಕಾರ್ಯಗಳನ್ನು ನಡೆಸಿ ದೇವಾಲಯಗಳಿಗೆ ಆರೆಸ್ಸೆಸ್ ಸಲಹೆ

ದೇವಸ್ಥಾನಗಳು ಅದ್ದೂರಿಯ ಕಾರ್ಯಕ್ರಮಗಳಿಗೆ ಹಣ ವ್ಯಯಿಸುವುದಕ್ಕೆ ಕಡಿವಾಣ ಹಾಕಿ ಶಿಕ್ಷಣ, ಆರೋಗ್ಯ ಮುಂತಾದ ಜನಕಲ್ಯಾಣದ ದಾನ ಕಾರ್ಯಕ್ರಮಗಳಿಗೆ ಹಣ ವಿನಿಯೋಗಿಸಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ ತಿಳಿಸಿದೆ.

ದೇವಸ್ಥಾನಗಳು ವಿವಿಧ ಬಗ್ಗೆ ಸಾಂಸ್ಕೃತಿಕ–ಧಾರ್ಮಿಕ ಕಾರ್ಯಕ್ರಮಗಳ ನೆಪದಲ್ಲಿ ಮಿಮಿಕ್ರಿ ಶೋಗಳನ್ನು, ಸುಡುಮದ್ದು ಪ್ರದರ್ಶನ ಏರ್ಪಡಿಸುವುದನ್ನು, ಸಿನೆಮಾ ಪ್ರದರ್ಶನ ಕೈಗೊಳ್ಳುವುದನ್ನು ನಿಲ್ಲಿಸಬೇಕು. ಇವುಗಳ ಬದಲು ಸಮಾಜದ ಬಡ ಜನರಿಗೆ ಉತ್ತಮ ಶಿಕ್ಷಣ, ಆರೋಗ್ಯ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಹಣದ ಸದ್ವಿನಿಯೋಗ ಮಾಡಬೇಕು ಎಂದು ಆರೆಸ್ಸೆಸ್ ತಿಳಿಸಿದೆ ಎಂದು ಹಿಂದುಸ್ಥಾನ್ ಟೈಮ್ಸ್ ವರದಿ ಮಾಡಿದೆ. ದೇವಸ್ಥಾನಗಳು ಸಾಂಸ್ಕೃತಿಕ ಕಾರ್ಯಕ್ರಮಗಳೆಂದು ಮಿಮಿಕ್ರಿ, ಮ್ಯಾಜಿಕ್ ಶೋಗಳನ್ನು ನಡೆಸುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸುತ್ತಿವೆ. ಕಾರ್ಯಕ್ರಮಗಳೇನಿದ್ದರೂ ಧಾರ್ಮಿಕ ಪರಂಪರೆಗಳಿಗೆ ಅನುಗುಣವಾಗಿ ನಡೆಯಬೇಕೇ ವಿನಾ ಅಶ್ಲೀಲತೆ, ಅಪ್ರಬುದ್ಧತೆಯನ್ನು ಪ್ರದರ್ಶಿಸುವುದಕ್ಕಾಗಿ ನಡೆಸಕೂಡದು ಎಂದು ಆರೆಸ್ಸೆಸ್ ಅಭಿಪ್ರಾಯಪಟ್ಟಿದೆ.

**ಆಯುರ್ವೇದ, ಯೋಗ, ಯುನಾನಿ, ಸಿದ್ಧ, ಹೋಮಿಯೋಪತಿಯನ್ನೊಳಗೊಂಡ ಆಯುಷ್ ವೈದ್ಯ ಪದ್ಧತಿ ಕುರಿತು ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಅಮೆರಿಕ ಆಸಕ್ತಿ ವಹಿಸಿದ್ದು, ಜಿನೇವಾದಲ್ಲಿ ಶೀಘ್ರ ಈ ಸಂಬಂಧ ಒಪ್ಪಂದಕ್ಕೆ ಸಹಿ ಹಾಕಲಾಗುತ್ತದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಆಯುಷ್ ಪದ್ಧತಿಯಡಿಯಲ್ಲಿ ಕ್ಯಾನ್ಸರ್ ಚಿಕಿತ್ಸೆಯ ಸಂಶೋಧನೆಗಾಗಿ ಅಮೆರಿಕ ವಿಜ್ಞಾನಿಗಳು ಜಂಟಿಯಾಗಿ ಸಂಶೋಧನೆ ನಡೆಸಲು ಆಸಕ್ತಿ ಹೊಂದಿದ್ದು, ಈ ಸಂಬಂಧ ಅಮೆರಿಕದ 15 ವಿಜ್ಞಾನಿಗಳು ಭಾರತಕ್ಕೆ ಬಂದು ಸೆಮಿನಾರ್ ಮಂಡಿಸಲಿದ್ದಾರೆ. ಪರಿಣಾಮಕಾರಿ ಔಷಧಿ ಕಂಡುಹಿಡಿಯುವ ಸಂಬಂಧ ಸಂಶೋಧನೆಗೆ ಭಾರತದ ಜತೆಗೆ ಕೈ ಜೋಡಿಸಲಿದ್ದಾರೆ ಎಂದು ಕೇಂದ್ರ ತಿಳಿಸಿದೆ.**

# ಸಂತನ ಬದುಕು ಸಂತನಿಗಲ್ಲ; ಅದು ಲೋಕದ ಹಿತಕೆ



ನಮ್ಮ ದೇಶದಲ್ಲಿನ ಸಂತರು ಕೇವಲ ವೇದಾಂತ, ತತ್ಸಂಬಂಧ ಪ್ರವಚನಗಳಲ್ಲಿ ನಿರತರು ಎಂದು ಮಾತನಾಡುವವರು, ಭಾವಿಸುವವರೇ ಅಧಿಕ. ನಿಜಮಾತ್ರದಲ್ಲಿ ಸರ್ಕಾರಕ್ಕಿಂತ ಹಲವು ಪಟ್ಟು ಹೆಚ್ಚು ಸಮಾಜಸೇವಾ ಚಟುವಟಿಕೆಗಳಲ್ಲಿ ಸಂತಸಮಾಜ ತೊಡಗಿಸಿಕೊಂಡಿದೆ. ನಿರ್ಲಿಪ್ತವಾಗಿ ಸಮಾಜಸೇವೆ, ದೀನರ ಸೇವೆ ಮಾಡುವ ಎಷ್ಟೋ ಸಂತರ ಬಗ್ಗೆ ಹೊರ ಪ್ರಪಂಚಕ್ಕೆ ಅರಿವೇ ಇಲ್ಲ.

ಪಂಜಾಬ್ ರಾಜ್ಯದ ಬಿಯಾಸ್ ನದಿಯ ಉಪನದಿಗಳಲ್ಲಿ ಒಂದಾದ ಕಾಳಿ ಬೇನ್ ಹಲವು ವರ್ಷಗಳಿಂದ ಕೈಗಾರಿಕಾ ತ್ಯಾಜ್ಯಗಳಿಂದ, ಮಾನವರ ಕಡೆಗಣನೆಯಿಂದ ಹಾಳುಬಿದ್ದಿತ್ತು. ಪರಿಣಾಮ ನದಿಯ ಅಕ್ಕಪಕ್ಕದ ಭೂಮಿಯಲ್ಲಿನ ಅಂತರ್ಜಲ ಮಟ್ಟವೂ ಕುಸಿದಿತ್ತು. ಅನಾರೋಗ್ಯದ ವಾತಾವರಣವೂ ನೆಲೆಸಿತ್ತು. ಇದರ ಪರಿವರ್ತನೆಗೆ ಬಲಬೀರ್ ಸಿಂಗ್ ಸೇಚೆವಾಲ್ ಎಂಬ ಸಂತರು ಪಣತೊಟ್ಟರು. ಸರ್ಕಾರದ ನೆರವನ್ನು ಪಡೆಯದೇ 160 ಕಿ.ಮೀ. ಉದ್ದದ ನದಿಯನ್ನು ಸ್ವಚ್ಛಗೊಳಿಸಿದ ಇವರು ಇಂದು 'ಇಕೋ ಬಾಬಾ' ಎಂದೇ ಜನಜನಿತರಾಗಿದ್ದಾರೆ.

ನದಿಯ ದುಸ್ಥಿತಿಯನ್ನು ಕಂಡು ಸಂತ ಸೀಚೆವಾಲ್ ನದಿಯ ಹೂಳನ್ನು ತೆಗೆದು ಸ್ವಚ್ಛಗೊಳಿಸಲು ಮುಂದಾದರು. ಸರ್ಕಾರದ ನೆರವನ್ನು ಪಡೆಯದೇ ಸ್ಥಳೀಯರನ್ನು ಜೊತೆಗೂಡಿಸಿಕೊಂಡು ಕಾರ್ಯಾರಂಭಿಸಿದರು. ಇಂದು 160 ಕಿ.ಮೀ. ನದಿಯನ್ನು ಸ್ವಚ್ಛಗೊಳಿಸಿ ಸುತ್ತಲಿನ ಹಳ್ಳಿಯ ಜನರಿಗೆ ಸಹಾಯವಾಗುವಂತೆ ಮಾಡಿದ್ದಾರೆ. ನದಿಯ ಸುತ್ತ ಹೂವಿನ, ಹಣ್ಣಿನ ಗಿಡಗಳನ್ನು ನೆಟ್ಟು ಸುತ್ತಲಿನ ಪ್ರಕೃತಿ ಸೌಂದರ್ಯವನ್ನೂ ಇಮ್ಮಡಿಸುವಂತೆ ಮಾಡಿದ್ದಾರೆ. ಅಷ್ಟೇ ಅಲ್ಲದೇ, ಸಂತ ಬಲಬೀರ್ ಸಿಂಗ್ ವಿನೂತನ ಮಾದರಿಯ, ಕಡಿಮೆ ವೆಚ್ಚದ ಒಳಚರಂಡಿ ವ್ಯವಸ್ಥೆಯನ್ನೂ ರೂಪಿಸಿದ್ದಾರೆ. ಈ ವಿನೂತನ ವ್ಯವಸ್ಥೆಯಿಂದ ಚರಂಡಿಯ ನೀರನ್ನು ಶುದ್ಧೀಕರಿಸಿ ವ್ಯವಸಾಯಕ್ಕೆ ಬಳಸಲಾಗುತ್ತಿದೆ. ಸುತ್ತಲಿನ 50 ಹಳ್ಳಿಗಳಲ್ಲಿ ಈ ಪದ್ಧತಿಯನ್ನು ಅಳವಡಿಸಲಾಗಿದೆ. ನೀರಿನ ಅಭಾವದಿಂದ ಕಂಗಾಲಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದ ರೈತರು ಸಂತರ ಈ ಲೋಕಸೇವಾ ಕಾರ್ಯದಿಂದ ಸಂತುಷ್ಟರಾಗಿದ್ದಾರೆ.





ಅಷ್ಟೇ ಅಲ್ಲದೇ, ಕೇಂದ್ರ ಸರ್ಕಾರವೂ ಗಂಗಾ ಶುದ್ಧೀಕರಣಕ್ಕೆ ಸಂತ ಸೀಚೆವಾಲ್‌ರ ಮಾರ್ಗದರ್ಶನವನ್ನು ಬಳಸಿಕೊಳ್ಳಲು ಚಿಂತನೆ ನಡೆಸಿದೆ. ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಹಲವಾರು ಬಾರಿ ತಮ್ಮ ಭಾಷಣಗಳಲ್ಲಿ ಸಂತ ಬಲಬೀರ್ ಸಿಂಗ್‌ರ ಸಾಧನೆಯನ್ನು ಉಲ್ಲೇಖಿಸಿದ್ದರು. ಸಂತ ಬಲಬೀರ್ ಸಿಂಗ್ ಕೇವಲ ಪರ್ಯಾವರಣದ ಸ್ವಚ್ಛತೆಗೆ ಪಣತೊಟ್ಟವರಲ್ಲ. ಸಮಾಜದಲ್ಲಿ ಬಡತನ, ಅನಕ್ಷರತೆ, ಮೂಢನಂಬಿಕೆ, ಮಹಿಳೆಯರ ಮೇಲಿನ ದೌರ್ಜನ್ಯ ನಿರ್ಮೂಲನೆ ಹೀಗೆ ಹಲವು ರೀತಿಯ ಸಮಾಜಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ತಾವು ನಿರ್ಮಿಸಿರುವ ಶಾಲೆಗಳಲ್ಲಿ ಈ ಬಗ್ಗೆ ತರಬೇತಿ, ಪ್ರಬೋಧನೆಗಳನ್ನು ನೀಡುತ್ತಿದ್ದಾರೆ. ಅಮೆರಿಕಾದ ಪ್ರತಿಷ್ಠಿತ ಟೈಮ್ ಪತ್ರಿಕೆಯವರು ಇವರನ್ನು 'ಹೀರೋ ಆಫ್ ಎನ್ವಿರಾನ್ಮೆಂಟ್' ಎಂಬ ಬಿರುದನ್ನು ನೀಡಿದೆ. ಸರಕಾರದ ಸಹಾಯವಿಲ್ಲದೇ ಕೇವಲ ಸ್ಥಳೀಯ ಜನರ ಸಹಕಾರದಿಂದ ನಡೆದ ಈ ಕಾರ್ಯ ನಮ್ಮ ಊರುಗಳಲ್ಲಿ ಹಾಳು ಬಿದ್ದ ನದಿ ಕೆರೆಗಳಿಗೆ ಮರು ಜೀವ ನೀಡಲು ನಮಗೆ ಸ್ಫೂರ್ತಿ ನೀಡಲಾರದೇ?

# ಬರ ಸಂತ್ರಸ್ತರ ನೆರವಿಗೆ ನಿಂತ ಆರೆಸ್ಸೆಸ್

ದೇಶಾದ್ಯಂತ ಬಿಸಿಲ ಬೇಗೆಯಿಂದ ಜನ ತತ್ತರಿಸಿ ಹೋಗಿದ್ದಾರೆ. ಕರ್ನಾಟಕವೂ ಸೇರಿದಂತೆ ದೇಶದ ಅನೇಕ ರಾಜ್ಯಗಳಲ್ಲಿ ಬರಗಾಲದ ಕರಿನೆರಳು ಚಾಚಿದೆ. ಮುಖ್ಯವಾಗಿ ಉತ್ತರ ಕರ್ನಾಟಕ ಭಾಗದ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಒಂದೆಡೆಯಾದರೆ ಜಾನುವಾರುಗಳಿಗೆ ನೀರು ಹಾಗೂ ಮೇವಿನ ಕೊರತೆ ಕಾಡುತ್ತಿದೆ. ಈ ಬೇಗೆಯನ್ನು ನಿವಾರಿಸಿಕೊಳ್ಳಲು ಹೆಣಗುತ್ತಿರುವ ಜನಸಾಮಾನ್ಯರು ಜಾನುವಾರುಗಳನ್ನು ಕಟುಕರ ಕೈಗೆ ಇಲ್ಲವೇ ಕೇಳಿದಷ್ಟು ಬೆಲೆಗೆ ವ್ಯಾಪಾರಿಗಳಿಗೆ ಮಾರಾಟ ಮಾಡಬೇಕಾದ ಸಂದಿಗ್ಧ ಪರಿಸ್ಥಿತಿ ಎದುರಾಗಿದೆ. ಇಂತಹ ಜನರ ನೆರವಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಧಾವಿಸಿದ್ದು, ವಿವಿಧ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಆರೆಸ್ಸೆಸ್‌ನ ನೂರಾರು ಮಂದಿ ಕಾರ್ಯಕರ್ತರು ಈಗಾಗಲೇ ಬರಪೀಡಿತ ಪ್ರದೇಶಗಳ ಜನರಿಗೆ ಅಗತ್ಯ ವಸ್ತುಗಳ ವಿತರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬರಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳಿಗೆ ನೆರವು ನೀಡಲು ಅನುಕೂಲವಾಗುವಂತೆ ಆರೆಸ್ಸೆಸ್ ಸಂಚಾಲಿತ ಸಂತ್ರಸ್ತ ಪರಿಹಾರ ನಿಧಿಯನ್ನು ಪ್ರಾರಂಭಿಸಲಾಗಿದ್ದು, ಪ್ರತ್ಯಕ್ಷವಾಗಿ ಪರಿಹಾರ ಕಾರ್ಯದಲ್ಲಿ ತೊಡಗಲಾಗದವರು ಈ ನಿಧಿಗೆ ಧನ ಸಹಾಯ ಮಾಡುವಂತೆ ಸಮಾಜ ಬಾಂಧವರಲ್ಲಿ ಆರೆಸ್ಸೆಸ್ ವಿನಂತಿ ಮಾಡಿಕೊಂಡಿದೆ. ಸಾವಿರಾರು ಮಂದಿ ಇದರಲ್ಲಿ ಕೈಜೋಡಿಸಿದ್ದಾರೆ. ಇದರಿಂದ ಬರದಿಂದ ಕಂಗೆಟ್ಟ ಉತ್ತರ ಕರ್ನಾಟಕ ಭಾಗದ ಜನತೆಗೆ ಅಗತ್ಯ ನೆರವನ್ನು ಆರೆಸ್ಸೆಸ್ ನೀಡುತ್ತಿದೆ.

## ನಾವೇನು ಮಾಡಬಹುದು?

- ಬರ ನಿರ್ವಹಣೆಯಲ್ಲಿ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸುವುದು
- ವಲಸೆ ಹೋಗುತ್ತಿರುವ ಗ್ರಾಮೀಣ ಜನರಿಗೆ ಜೀವನಾವಶ್ಯಕ ವಸ್ತುಗಳನ್ನು ಒದಗಿಸುವುದು.
- ಸಾಧ್ಯವಿರುವೆಡೆಗಳಲ್ಲಿ ಜಾನುವಾರುಗಳಿಗೆ ವೈಯಕ್ತಿಕವಾಗಿ ಮೇವು ಕಲ್ಪಿಸುವುದು
- ಖಾಸಗಿಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಮೇವಿನ–ನೀರಿನ ವ್ಯವಸ್ಥೆ ಕಲ್ಪಿಸುವುದು
- ಆರೆಸ್ಸೆಸ್ ಸಂಚಾಲಿತ ಸಂತ್ರಸ್ತ ಪರಿಹಾರನಿಧಿ'ಗೆ ಧನಸಹಾಯ ಮಾಡುವುದು.

**ಖಾತೆ ಸಂಖ್ಯೆ: 0514101042880 (IFSC: CNRB 0000514);**
**ಖಾತೆ ಸಂಖ್ಯೆ: 0789101009327 (IFSC: CNRB 0000789)**
**ಮಾಹಿತಿಗಾಗಿ ಸಂಪರ್ಕಿಸಿ 9448847866**




ಬಾಗಲಕೋಟೆಯ ಬನಹಟ್ಟಿ ಗ್ರಾಮದಲ್ಲಿ ಸ್ವಯಂಸೇವಕರಿಂದ ಕುಡಿಯುವ ನೀರಿನ ವ್ಯವಸ್ಥೆ




ಸಿಂಧನೂರಿನ ನಾಗರಿಕರಿಗಾಗಿ ತೆರೆಯಲಾದ ಕುಡಿಯುವ ನೀರಿನ ಘಟಕ



ಗೋವುಗಳಿಗೆ ನೀರು ಹಾಗೂ ಮೇವು ಪೂರೈಕೆಗೆ ಮುಂದಾದ ಆರೆಸ್ಸೆಸ್ ಸ್ವಯಂಸೇವಕರು



ಕಲ್ಬುರ್ಗಿಯ ಅಂಕಲಗಿ ಗ್ರಾಮದಲ್ಲಿ ಉಚಿತ ಮೇವು ವಿತರಣೆಗೆ ಆರೆಸ್ಸೆಸ್ ಸ್ವಯಂಸೇವಕರಿಂದ ಸಿದ್ಧತೆ

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ/ನವೀಕರಣ/ವಿಳಾಸ ಬದಲಾವಣೆಗಾಗಿ ಸಂಪರ್ಕಿಸಿ : #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04. ಮೊಬೈಲ್: 97391 83021 ಸಂಪಾದಕೀಯ : 97312 64009